# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI





ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ-10 Reg. No. : KARBIL/2005/16123 ಫೆಬ್ರವರಿ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ - 2 ಪ್ರಕಟಣೆ : 10-02-2021



● e-mail : jnanashakthisss@gmail.com ● whatsapp : 7795116598 ● Mobile : 9343361618


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಅರ್ಥಪೂರ್ಣವಾಗಿ ನಡೆದ 'ಸ್ಕೋಲರ್ಸ್ ಡೇ' SCHOLAR'S DAY




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಸಮಾಜಮುಖೀ ಸೇವೆಯಲ್ಲಿ ತೊಡಗಿಸಿಕೊಂಡಿರುವ ನಮ್ಮ ಸಮಾಜದ ಒಂದು ಪ್ರತಿಷ್ಠಿತ ಸಂಸ್ಥೆಯಾಗಿರುತ್ತದೆ.

ಶ್ರೀ ಸುಬ್ರಹ್ಮಣ್ಯ ಸಭಾವು ಸ್ಥಾಪನೆಯಾದ ಕಾಲಘಟ್ಟದಲ್ಲಿ ಸಮಾಜವು ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ, ಶೈಕ್ಷಣಿಕವಾಗಿಯೂ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿತ್ತು. ಸಮಾಜದ ಬಗ್ಗೆ ವಿಶೇಷ ಕಳಕಳಿಯನ್ನು ಹೊಂದಿದ ಹಲವು ವಿದ್ಯಾವಂತ, ಪ್ರಜ್ಞಾವಂತ ಮಹನೀಯರು ಈ ಬಗ್ಗೆ ಚಿಂತಿಸಿ ಸಮಾಜದ ಉನ್ನತೀಕರಣವನ್ನೇ ಮುಖ್ಯ ಉದ್ದೇಶವನ್ನಾಗಿಟ್ಟ ನಿಯಮ–ನಿಬಂಧನೆಗಳನ್ನು ರೂಪಿಸುವುದರ ಮೂಲಕ ಸಭಾದ ಕಾರ್ಯಸೂಚಿಗಳಿಗೆ ಒಂದು ಚೌಕಟ್ಟನ್ನು ರೂಪಿಸಿದರು. ಇವುಗಳಲ್ಲಿ ಅತ್ಯಂತ ಪ್ರಮುಖವಾದುದು ನಮ್ಮ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸರ್ವರೀತಿಯ ಪ್ರೋತ್ಸಾಹವನ್ನು ನೀಡುವುದು. ಅದಕ್ಕಾಗಿಯೇ ಶ್ರೀ ಸುಬ್ರಹ್ಮಣ್ಯ ಸಭಾವು ವಿದ್ಯಾರ್ಥಿ ನಿಲಯದ ಸ್ಥಾಪನೆ ಮಾಡಿತು. ಅಲ್ಲದೆ, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ (ಸಹಾಯಧನ) ಮುಂತಾದ ಎಲ್ಲಾ ರೀತಿಯ ಸಹಕಾರಗಳನ್ನು ನೀಡಲು ಪ್ರಾರಂಭಿಸಿತು.

ಈ ಎಲ್ಲಾ ಸವಲತ್ತುಗಳನ್ನು ಪಡೆದ ಹಲವಾರು ವಿದ್ಯಾರ್ಥಿಗಳು ಇಂದು ಸಮಾಜದಲ್ಲಿ ಹಲವು ಉನ್ನತ ಹುದ್ದೆಗಳಲ್ಲಿದ್ದು, ಸಭಾದ ಅಭಿವೃದ್ಧಿಯ ನಿರಂತತೆಯಲ್ಲಿ ಕೈಜೋಡಿಸಿರುತ್ತಾರೆ. ಇದರಿಂದ ಸಭಾವು ಈ ಮಟ್ಟಕ್ಕೆ ಸಮಾಜಮುಖಿಯಾಗಿ ಬೆಳೆಯಲು ಕಾರ್ಯಸಾಧ್ಯವಾಗಿದೆ.

ಈ ಶೈಕ್ಷಣಿಕ ವರ್ಷದಲ್ಲಿ ನೀಡಿದ ಅರ್ಧ ಕೋಟಿಗಿಂತಲೂ ಅಧಿಕ ವಿದ್ಯಾರ್ಥಿವೇತನವು ಇದಕ್ಕೆ ಸಾಕ್ಷಿಯಾಗಿದೆ. ಕಳೆದ ಮೂರು ವರ್ಷಗಳಿಂದ ಈ ಸಹಾಯಧನ ವಿತರಣೆಯನ್ನು 'ಸ್ಕೋಲರ್ಸ್ ಡೇ' ಎಂಬ ವೈಶಿಷ್ಟ್ಯಪೂರ್ಣ ಕಾರ್ಯಕ್ರಮದೊಂದಿಗೆ ಸಂಭ್ರಮಿಸಲಾಗುತ್ತಿದೆ.

ಈ ವರ್ಷದ 'ಸ್ಕೋಲರ್ಸ್ ಡೇ' ಕಾರ್ಯಕ್ರಮವನ್ನು ತಾ. 17–01–2021ನೇ ಭಾನುವಾರ ನಡೆಸಲಾಯಿತು. ಪೂರ್ವಾಹ್ನ ಗಂಟೆ 8–30ರಿಂದ 10–15ರ ತನಕ ಉಪಾಹಾರ ಹಾಗೂ ನೋಂದಾವಣಾ ಪ್ರಕ್ರಿಯೆ ನಡೆಸಲಾಯಿತು.

ಶ್ರೀಮತಿ ಸುಮನ್‌ಕೃಷ್ಣರ ಶ್ರೀಗಣೇಶ ಸ್ತುತಿಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಗಣ್ಯರಿಂದ ದೀಪ ಬೆಳಗಿಸಿ ವಿದ್ಯುಕ್ತವಾಗಿ ಉದ್ಘಾಟಿಸಲಾಯಿತು.

ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾಭ್ಯಾಸ ಸಮಿತಿಯ ಅಧ್ಯಕ್ಷರಾದ ಡಾ। ಎ. ಪಿ. ಕೃಷ್ಣರು ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಮಾಜದ ವಿದ್ಯಾಭ್ಯಾಸದ ಪ್ರೋತ್ಸಾಹದ ಪ್ರಕ್ರಿಯೆಯಲ್ಲಿ ಶ್ರೀ ಸಭಾದ ಇಂದಿನ ಆಡಳಿತ ಮಂಡಳಿಯು ಯಶಸ್ವಿಯಾಗಿ ಮುಂದುವರಿಯುತ್ತಿದ್ದು ಈ ಶೈಕ್ಷಣಿಕ ವರ್ಷದಲ್ಲಿ ರೂ. 54 ಲಕ್ಷ ಸಾಲ ವಿದ್ಯಾರ್ಥಿವೇತನ ಮತ್ತು ರೂ. 6 ಲಕ್ಷ ಇತರೇ ವಿದ್ಯಾರ್ಥಿ ಪ್ರೋತ್ಸಾಹ ಸಹಾಯಧನವನ್ನು ನೀಡಿದ ಸಂತೋಷವನ್ನು ಎಲ್ಲರೊಂದಿಗೆ ಹಂಚಿಕೊಂಡರು.

ಡಾ। ಎ. ಪಿ. ಕೃಷ್ಣರವರು ಸಂಪನ್ಮೂಲ ವ್ಯಕ್ತಿಗಳಾಗಿ ಬರಮಾಡಿರುವ ಪ್ರೊ। ಎಂ. ಎಸ್. ಮೂಡಿತ್ತಾಯ, ಪ್ರೊ. ವೈಸ್‌ಚಾನ್ಸಲರ್, ನಿಟ್ಟೆ (ಡೀಮ್ಡ್ ಟು ಬಿ ಯೂನಿವರ್ಸಿಟಿ) ಹಾಗೂ ಸಿಎ. ಎಂ. ಎನ್. ಪೈ ಇವರನ್ನು ಹಾರ್ದಿಕವಾಗಿ ಸ್ವಾಗತಿಸಿದರು. ವೇದಿಕೆಯಲ್ಲಿದ್ದ ಗಣ್ಯರಿಗೆ, ಸಭೆಯ ಸಕ್ರಿಯ ಕಾರ್ಯಕರ್ತರಿಗೆ ಸ್ವಾಗತ ಕೋರಿದರು. 'ಸ್ಕೋಲರ್ಸ್ ಡೇ'ಗೆ ಹಾಜರಾದ ಎಲ್ಲಾ ವಿದ್ಯಾರ್ಥಿ ಸಮೂಹ ಮತ್ತವರ ಪೋಷಕರನ್ನು ಅತ್ಯಂತ ಆದರದಿಂದ ಸ್ವಾಗತಿಸಿದರು. ಶ್ರೀಮತಿ ಅಂಕಿತ ಅನಂತಪುರ ಇವರು ಅನನ್ಯ ವಿ. ಆರ್. ಮೂಡಿಗೆರೆ ಎಂಬ ಬಿ.ಕಾಂ. ವಿದ್ಯಾರ್ಥಿನಿಯ ಒಂದು ವರ್ಷದ ವಿದ್ಯಾಭ್ಯಾಸದ ಖರ್ಚನ್ನು ಶ್ರೀ ಸಭಾದ ಮೂಲಕ ಪ್ರಾಯೋಜಿಸಿದರು. ಇದರ ರೂ. 25,000–00ದ ಚೆಕ್ಕನ್ನು ಗಣ್ಯರು ಫಲಾನುಭವಿ ವಿದ್ಯಾರ್ಥಿನಿಗೆ ಹಸ್ತಾಂತರಿಸಿದರು.


*(3ನೇ ಪುಟಕ್ಕೆ ಮುಂದುವರಿಯುವುದು.)*





Please log on to www.subramanyasabha.com for Jnanashakthi Monthly, Event Photos, Address of Sthanikas and latest Informations.


● ಚಾರಿತ್ರ್ಯ ನಿರ್ಮಾಣ ಮಾಡುವ, ಮಾನಸಿಕ ಸಾಮರ್ಥ್ಯ ಹೆಚ್ಚಿಸುವ, ಬುದ್ಧಿಶಕ್ತಿಯನ್ನು ವಿಸ್ತರಿಸುವ, ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವಂತೆ ಮಾಡುವ ಶಿಕ್ಷಣವು ನಮಗಿಂದು ಬೇಕಾಗಿದೆ.
– ಸ್ವಾಮಿ ವಿವೇಕಾನಂದ

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್
ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ


## ಬಾಳಂಚಿನ ಕಿತ್ತಳೆ ಹಣ್ಣು


ಏನೆನ್ನಲಿ ಈ ಬಗೆಯ
ಸೌಂದರ್ಯ ಲಹರಿಗೆ
ಯಾರು ಚೆಲ್ಲಿದರು ಬಾನಂಚಿನಲಿ
ಈ ಪರಿಯ ರಂಗು?
ಯಾರು ಬಿಡಿಸಿದರು
ಈ ಹಕ್ಕಿಗಳ ಹಾರುವ ಚಿತ್ತಾರ
ಗಿಡ ಮರಗಳ ಹಸುರಿನ ಜೊತೆ
ಮೋಡಗಳ ಬಣ್ಣದಾಟ

ಬ್ರಾಹ್ಮಿಯಲಿ ಮೇಲೇರಿ
ತಿಮಿರನಾಗೆಲುವ ನೇಸರನೋ
ಸಂಧ್ಯೆಯಲಿ ಮುಳುಗುವಾ
ಆ ಸೂರ್ಯನಾರಾಯಣನೋ
ನಮ್ಮನೆ ಪುಟಾಣಿ ಪುಟ್ಟನ
ಮೇಲೇಳುವ ಚಂದಮಾಮನೋ
ಗುಳುಂ ಎಂದು ಮುಳುಗುವ
ಸೂರ್ಯಮಾಮನೋ
ನಿನ್ನಾಟವನಾನರಿಯೆ
ಶರಧಿಯಲಿ ಮುಳುಗಿದರು

ಮತ್ತೆ ಮೇಲೇಳುವೆ ಉಷೆಯ ಜೊತೆ
ನೀಡುವೆ ಜಗಕೆಲ್ಲ ಬೆಳಗು,
ಚೈತನ್ಯ ಚೇತನ
ಗುರುವೆ ನಿನ್ನಂದ ನಾಕಲಿತೆ
ಸೋಲಿನಲೂ ಎದ್ದೇಳುವಾ
ಗೆಲುವಿನಾ ಪಾಠವಾ
ಅವ್ಯಕ್ತ ಶಕ್ತಿಯೂ ಪ್ರಕೃತಿಯ ಸೂಕ್ಷ್ಮವಾ

ಶ್ರೀಮತಿ ಸ್ನೇಹಲತಾ ದಿವಾಕರ್, ಮಂಗಳೂರು
ಮೊಬೈಲ್ : 7022737312


ॐ



## ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನ, ಕಡಬ



ಶ್ರೀ ಶ್ರೀ ಶ್ರೀ ಶೃಂಗೇರಿ ಪೀಠದ ಮಹಾಜಗದ್ಗುರುಗಳವರ
ದಿವ್ಯಹಸ್ತದಿಂದ ಪುನಃಪ್ರತಿಷ್ಠಾಪಿಸಲ್ಪಟ್ಟ
ತಲೇಕಿ ಶ್ರೀ ಶ್ರೀನಿವಾಸ ಮತ್ತು ಶ್ರೀ ವಿಶ್ವನಾಥ ದೇವರ

**34ನೇ**
**ಪ್ರತಿಷ್ಠಾ ವಾರ್ಷಿಕೋತ್ಸವವು**

ಬ್ರಹ್ಮಶ್ರೀ ವಾಗೀಶ ತಂತ್ರಿಗಳವರ ನೇತೃತ್ವದಲ್ಲಿ
ತಾರೀಕು **19-02-2021**ನೇ ಶುಕ್ರವಾರ ರಥಸಪ್ತಮಿಯಂದು
ಜರಗಲಿರುವುದು.

ಸಮಾಜ ಬಾಂಧವರೆಲ್ಲರೂ ಈ ದೇವತಾಕಾರ್ಯದಲ್ಲಿ ಭಾಗವಹಿಸಿ
ದೇವತಾ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

ಕುಂಭಾಟ್ ಕುಟುಂಬಸ್ಥರು ಹಾಗೂ ಬಂಧು-ಮಿತ್ರರು

ಪತ್ರಿಕೆಗೆ ಶುಭ ಬಯಸುವ-



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

**ಶ್ರೀ ಶ್ರೀ ಭಾರತೀತೀರ್ಥ ಸಭಾಭವನ, ಮಠದಬೆಟ್ಟು, ಪುತ್ತೂರು**

ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ವಠಾರದಲ್ಲಿ
ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ
ಅಮೃತಹಸ್ತದಿಂದ ಉದ್ಘಾಟನೆಗೊಂಡಿರುವ ಸುಸಜ್ಜಿತ
'ಶ್ರೀ ಶ್ರೀ ಭಾರತೀತೀರ್ಥ ಸಭಾಭವನ'ವು
ಸಮಾಜ ಬಾಂಧವರ ಅನುಕೂಲತೆಗೆ ತಕ್ಕಂತೆ
**ಹೋಮಾದಿಗಳು, ವಿಶೇಷ ಪೂಜಾದಿಗಳು**
**ಮದುವೆ, ಉಪನಯನ ಮುಂತಾದ ಸಮಾರಂಭಗಳಿಗೆ**
ಲಭ್ಯವಿರುತ್ತದೆ.
ಅಲ್ಲದೇ ಇತರ ಸಭಾ ಕಾರ್ಯಕ್ರಮಗಳಿಗೂ ಅವಕಾಶವಿರುತ್ತದೆ.

ವಿಶೇಷ ಮಾಹಿತಿಗೆ ಸಂಪರ್ಕಿಸಿರಿ :

ಯಂ. ನಾಗೇಶ ಶರ್ಮ — ಮೊಬೈಲ್ : 9901247080
ಯಂ. ಪ್ರಶಾಂತ ಶರ್ಮ — ಮೊಬೈಲ್ : 9902022410

Phone : 0824 - 2440110, 2213946

**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
***Authorised Dealers for :***
**Vijai Super GP 150 &**
**Vikram 3 Wheelers (Petrol & Diesel)**



***Prop. : P. Srikanth Rao*** Mobile : 9343361618

**M/s. SAMARPAN**
***HOUSE OF STATIONERY***
**"Vijaya Nivas", Opp. Pio Mall**
**Bejai Church Road, Mangalore - 4**



ಪತ್ರಿಕೆಗೆ ಶುಭ ಬಯಸುವ-



ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

The RIGHT Place for the Customer

**RAJESH**
**POWER PRESS**
**PRINTERS & PUBLISHERS**
**DARBE - 574 202, PUTTUR, D. K., KARNATAKA**
Phone : (08251) 231696, 231697 & 322386
E-mail : msraghunathrao@hotmail.com

**PREETHIKA AUTOMOBILES**
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
***Dealers in :***
**Minda Switches, M. K. Products, Swiss Auto Products, Power Coils**

✆ 2493633
9845851573

## *** ಅಪಾರ ಕೀರ್ತಿ ಗಳಿಸಿ ***



ಮೂಡುಬಿದ್ರೆ ಬೊಕ್ಕಸ ಸದಾಶಿವ ರಾವ್ ಮತ್ತು ಶ್ರೀಮತಿ ಪ್ರೀತಿ ರಾವ್‌ರವರ ಪುತ್ರಿ **ಡಾ। ದೀಪ್ತಿ ಬಿ. ರಾವ್** 2020ನೇ ಸಾಲಿನ ಕೊನೆಯ ವಾರ್ಷಿಕ ಪರೀಕ್ಷೆಯಲ್ಲಿ ಕಾಲೇಜಿಗೆ ಪ್ರಥಮ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ 4ನೇ ರ್‍ಯಾಂಕ್ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ.

---



ಶ್ರೀ ಸುಬ್ರಹ್ಮಣ್ಯ ಸಭಾದ ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಯಸ್. ಮತ್ತು ಶ್ರೀಮತಿ ಭಾರತಿ ರಾವ್‌ರವರ ಪುತ್ರಿ **ಕು। ಪ್ರೇರಣಾ ರಾವ್** ಈ ಬಾರಿಯ ಭರತನಾಟ್ಯ ವಿದ್ವತ್‌ಪೂರ್ವ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಮಂಗಳೂರಿನ ಎ. ಜೆ. ಮೆಡಿಕಲ್ ಸೈನ್ಸ್ ಕಾಲೇಜಿನ 2ನೇ ವರ್ಷದ ವಿದ್ಯಾರ್ಥಿನಿ.

---



ಶ್ರೀ ಸುಬ್ರಹ್ಮಣ್ಯ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಮತ್ತು ಶ್ರೀಮತಿ ಶೈಲಜಾ ರಾವ್‌ರವರ ಪುತ್ರಿ **ಕು। ಪಿ. ಸಿಂಚನ ರಾವ್** ಈ ಬಾರಿಯ ಭರತನಾಟ್ಯ ವಿದ್ವತ್‌ಪೂರ್ವ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಮಂಗಳೂರಿನ ಸೈಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿನಿ.

## ಶುಭಹಾರೈಕೆಗಳು



ಸುಶಾನ್ ರಾವ್ ಟಿ.

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು 2020ನೇ ಸಾಲಿನಲ್ಲಿ ನಡೆದ ಸಂಗೀತ ಪರೀಕ್ಷೆ ಜೂನಿಯರ್ ವಿಭಾಗದಲ್ಲಿ ಸುಶಾನ್ ರಾವ್ ಟಿ. ಡಿಸ್ಟಿಂಕ್ಷನ್ ಶ್ರೇಣಿಯಲ್ಲಿ ಉತ್ತೀರ್ಣನಾಗಿರುತ್ತಾನೆ.**

ಕದ್ರಿ ನೃತ್ಯವಿದ್ಯಾಲಯದ ಶ್ರೀಮತಿ ಉಷಾ ಪ್ರವೀಣ್ ಕುಮಾರ್ ಇವರಲ್ಲಿ ಸಂಗೀತ ತರಬೇತಿ ಪಡೆಯುತ್ತಿದ್ದು, ವಾಮಂಜೂರು ಶ್ರೀ ಭಾಸ್ಕರ್ ರಾವ್ ಟಿ. ಮತ್ತು ಶ್ರೀಮತಿ ಚಂದ್ರಕಲಾ ಎನ್. ಇವರ ಪುತ್ರ ಹಾಗೂ ಡೊಂಗರಕೇರಿ ಕೆನರಾ ಆಂಗ್ಲ ಮಾ. ಹಿ. ಪ್ರಾ. ಶಾಲೆಯ 8ನೇ ತರಗತಿಯ ವಿದ್ಯಾರ್ಥಿ.

**ಮುಂದಿನ ವಿದ್ಯಾಭ್ಯಾಸಕ್ಕೆ ಶುಭಹಾರೈಸುವ–**

**ಶ್ರೀ ಭಾಸ್ಕರ್ ರಾವ್ ಟಿ.**
**ಜಯನಗರ ಅಪಾರ್ಟ್‌ಮೆಂಟ್, 'ಬಿ' ವಿಂಗ್, ಫ್ಲಾಟ್ ನಂ. 307**
**ಸಿಟಿ ಹಾಸ್ಪಿಟಲ್ ಎದುರುಗಡೆ, ಕದ್ರಿ ರಸ್ತೆ, ಮಂಗಳೂರು - 575 003**
**ಮೊಬೈಲ್ : 9481516948**

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಕಾಸರಗೋಡಿನ ಶ್ರೀ ರಮಾಮಾಧವ ಮತ್ತು ಶ್ರೀಮತಿ ಸರೋಜರವರ ಪುತ್ರಿ **ಚಿ। ಸೌ। ಕೃತಿಕಾ** ಹಾಗೂ ಶ್ರೀ ಎ. ಪ್ರಕಾಶಚಂದ್ರ ರಾವ್ ಮತ್ತು ಶ್ರೀಮತಿ ಶೋಭರವರ ಸುಪುತ್ರ **ಚಿ। ಕಾರ್ತಿಕ**ರವರ ವಿವಾಹವು ತಾ. 15–01–2021ನೇ ಶುಕ್ರವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನೆರವೇರಿತು.

*(1ನೇ ಪುಟದಿಂದ ಮುಂದುವರಿದುದು.)*

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಅರ್ಥಪೂರ್ಣವಾಗಿ ನಡೆದ 'ಸ್ಕೋಲರ್ಸ್ ಡೇ'

SCHOLAR'S DAY

ಶ್ರೀ ಹರ್ಷಕುಮಾರ್ ಕೇದಿಗೆಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವಿದ್ಯಾಭ್ಯಾಸಕ್ಕೆ ಕೊಡುವ ಪ್ರೋತ್ಸಾಹದ ಅಗತ್ಯವನ್ನು ಮನಮುಟ್ಟುವಂತೆ ವಿಷದಪಡಿಸಿದರು. ಸಂಪನ್ಮೂಲ ವ್ಯಕ್ತಿಗಳಿಂದ ಎರಡು ವಿಚಾರಗೋಷ್ಠಿಗಳು ನಡೆದವು. ಡಾ। ಎಂ. ಎಸ್. ಮೂಡಿತ್ತಾಯ ರವರು ಇಂದಿನ ದಿನಗಳಲ್ಲಿ ನಮ್ಮ ಭಾರತ ದೇಶ ಯಾವೆಲ್ಲಾ ರಂಗಗಳಲ್ಲಿ ವಿಶ್ವಗುರುವಾಗುವತ್ತ ದಾಪುಗಾಲಿನಲ್ಲಿ ಸಾಗುತ್ತಿದೆ ಎಂಬುದನ್ನು ವಿವರಿಸಿದರು. ಇಂದಿನ ಭಾರತೀಯ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ವಿಪುಲ ಅವಕಾಶಗಳಿವೆ. ಅದಕ್ಕಾಗಿ ತಮ್ಮ ಎಲ್ಲ ಸಾಧ್ಯತೆಗಳನ್ನು ಬಳಸಿಕೊಳ್ಳಬೇಕೆಂದು ಕರೆ ಇತ್ತರು. ಕೊರತೆಗಳ ಅರಿವಿನಲ್ಲಿ ತಮ್ಮ ಪ್ರವೃತ್ತಿಗೆ ಅನುಗುಣವಾದ ವೃತ್ತಿಯನ್ನು ಆರಿಸಿಕೊಂಡು ಜೀವನವನ್ನು ಸಾರ್ಥಕ್ಯಪಡಿಸಿಕೊಳ್ಳಬೇಕೆಂದು ತಿಳಿಹೇಳಿದರು. ಸಿಎ. ಎಂ. ಎನ್. ಪೈಯವರು ತುಂಬಾ ಸರಳ ಮಾತುಗಳಿಂದ ಉದಾಹರಣೆಗಳೊಂದಿಗೆ ವಿದ್ಯಾರ್ಥಿಗಳು ತಮ್ಮ ಮನೋಬಲವನ್ನು ವೃದ್ಧಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡಿದರು.

ಎರಡು ವಿಚಾರಗೋಷ್ಠಿಗಳು ಕಳೆದ ಬಳಿಕ ಶ್ರೀ ಇನ್ನ ಚಂದ್ರಕಾಂತ ರಾಯರು ಬಹಳ ಸುಂದರವಾಗಿ ವಿಷಯಗಳ ಕ್ರೋಢೀಕರಣ ಮಾಡಿ ವಿದ್ಯಾರ್ಥಿಗಳಿಗೆ ವಿವರಿಸಿದರು. ಆ ಬಳಿಕ ಅರ್ಥಪೂರ್ಣ ಸಮೂಹ ಚರ್ಚೆ ಮತ್ತು ಸಂವಾದ ನಡೆಯಿತು. ವಿದ್ಯಾರ್ಥಿಗಳ ಹಲವಾರು ಸಮಯೋಚಿತ, ಗಂಭೀರ ಪ್ರಶ್ನೆಗಳಿಗೆ ಗಣ್ಯರು ಉತ್ತರ ಹೇಳುವ ಮೂಲಕ **'ಸ್ಕೋಲರ್ಸ್ ಡೇ'**ಗೆ ಜೀವ ತುಂಬಿದರು. ಡಾ। ಎ. ಪಿ. ಕೃಷ್ಣರವರು ಈ ವರ್ಷ ಸಭೆಯಿಂದ ಕೊಡಮಾಡುವ ವಿವಿಧ ವಿದ್ಯಾರ್ಥಿವೇತನಗಳ ಅಂಕಿ ಅಂಶಗಳನ್ನು ತಿಳಿಸಿದರು. ಈ ಸಮಾರಂಭಕ್ಕೆ ಹಾಜರಾದ ಸುಮಾರು 125 ವಿದ್ಯಾರ್ಥಿಗಳಿಗೆ ಗಣ್ಯರಿಂದ ಸ್ಕಾಲರ್‌ಶಿಪ್ ವಿತರಿಸಲ್ಪಟ್ಟಿತು. ಈ ಸಮಾರಂಭದಲ್ಲಿ ಭಾಗಿಯಾದ ಎಲ್ಲಾ ಗಣ್ಯರನ್ನೂ, ವಿದ್ಯಾರ್ಥಿಗಳು ಮತ್ತು ಅವರ ಪೋಷಕರನ್ನೂ, ಇದಕ್ಕೆ ಸಹಕರಿಸಿದ ಸಮಾಜದ ಎಲ್ಲಾ ಸಹೃದಯಿಗಳನ್ನೂ ಮನತುಂಬಿ ಡಾ। ಎ. ಪಿ. ಕೃಷ್ಣರವರು ವಂದಿಸಿದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಶ್ರೀಕಾಂತ್ ರಾವ್, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಈ ಸಭೆ ಕೊಡಮಾಡುವ ಎಲ್ಲಾ ವಿದ್ಯಾಭ್ಯಾಸ ಪ್ರೋತ್ಸಾಹಧನವನ್ನು ಸದ್ಬಳಕೆ ಮಾಡಿ ಮುಂದಿನ ದಿನಗಳಲ್ಲಿ ಸಮಾಜಕ್ಕೆ ಹಾಗೂ ದೇಶಕ್ಕೆ ಗೌರವ ತರಬೇಕು ಹಾಗೂ ಈ ಪ್ರಕ್ರಿಯೆಯನ್ನು ನಿರಂತರ ಮುಂದುವರಿಸಬೇಕೆಂಬ ಆಶಯದೊಂದಿಗೆ ಸಭಾ ಕಾರ್ಯಕ್ರಮ ಮುಕ್ತಾಯಗೊಂಡಿತು. ಶುಚಿರುಚಿಯಾದ ಮಧ್ಯಾಹ್ನದ ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.






# ಭಾವಪೂರ್ಣ ಶ್ರದ್ಧಾಂಜಲಿ



ಕೋಲ್ಪೆ ಭಾಸ್ಕರ ರಾವ್

ಜನನ : 27-12-1943 ● ನಿಧನ : 20-01-2021

ಪುತ್ತೂರು ತಾಲೂಕಿನ ಕೋಲ್ಪೆ ಕೊಡಂಗೆಯ ಆಯುರ್ವೇದ ಪಂಡಿತರಾಗಿದ್ದ ದಿ। ವೆಂಕಟರಮಣಯ್ಯ ಮತ್ತು ಭಾಗೀರಥಿಯಮ್ಮ ದಂಪತಿಗಳ ದ್ವಿತೀಯ ಪುತ್ರನಾಗಿ ತಾ. 27–12–1943ರಂದು ಉದಯಿಸಿ, ಪುತ್ತೂರಿನಲ್ಲಿ ವಿದ್ಯಾಭ್ಯಾಸ ಪೂರೈಸಿ, ಮುಂಬೈ–ಬೆಂಗಳೂರಿನ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಪತ್ನಿ ಸೌ। ಶಾಂತಾ ಹಾಗೂ ಪುತ್ರ ಚಿ। ಪ್ರಶಾಂತ ಹಾಗೂ ಸೊಸೆ ಮತ್ತು ಮೊಮ್ಮಗಳೊಂದಿಗೆ ಸಂತೃಪ್ತ ಜೀವನವನ್ನು ನಡೆಸಿದ ನಮ್ಮ ಸಮಾಜಕ್ಕೆ ಮುಖ್ಯವಾಗಿ ಧಾರ್ಮಿಕ ಕೇಂದ್ರಗಳಿಗೆ, ತನ್ನ ಕೈಲಾದ ಕೊಡುಗೆಗಳನ್ನಿತ್ತು ಬೆಳಗಿದ ನನ್ನ ತಮ್ಮ **'ಭಾಸ್ಕರ'**ನು ತಾ. 20–1–2021ರಂದು ಬೆಂಗಳೂರಿನಲ್ಲಿ ಅನಾರೋಗ್ಯದಿಂದ ಅಸ್ತಮಿಸಿದನು.

**ಅಗಲಿದ ದಿವ್ಯಚೇತನಕ್ಕೆ ಭಾಷ್ಪಾಂಜಲಿಗಳು.**

ಬೆಂಗಳೂರಿನಲ್ಲಿ ನಡೆದ ಔರ್ಧ್ವದೈಹಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸಮಸ್ತ ಬಂಧು–ಬಾಂಧವರಿಗೆ ಕೃತಜ್ಞತೆಗಳನ್ನು ಅರ್ಪಿಸುವ–

**ಜಿ. ಕೆ. ಕೋಲ್ಪೆ, ಉಡುಪಿ**



ಶ್ರೀಮತಿ ಸರಸ್ವತಿ ಎನ್. ಜಿ. ಕೆ. ರಾವ್

ಜನನ : 15-10-1949 ● ನಿಧನ : 22-01-2021

ನಂದಳಿಕೆ ಭವಾನಿಶಂಕರ ರಾವ್ ಮತ್ತು ರತ್ನಮ್ಮರವರ ಸೊಸೆ, ವಳಕಾಡು 'ಭಾಗೀರಥಿ ಸದನ' ನಿವಾಸದಲ್ಲಿರುವ ಎನ್. ಗೋಪಾಲಕೃಷ್ಣರವರ ಧರ್ಮಪತ್ನಿ **ಶ್ರೀಮತಿ ಸರಸ್ವತಿ ಎನ್.ಜಿ.ಕೆ. ರಾವ್** ಇವರು ಅಲ್ಪಕಾಲದ ಅನಾರೋಗ್ಯದಿಂದ ಹಠಾತ್ ನಿಧನರಾದರು. ಜೀವಿತಕಾಲದಲ್ಲಿ ಪಾದರಸದಂತೆ ಚುರುಕಾಗಿದ್ದು, ಎಲ್ಲರೊಡನೆ ಬೆರೆಯುತ್ತಿದ್ದು, ಕಷ್ಟಕಾಲದಲ್ಲಿ ಭಾಗಿಯಾಗುತ್ತಿದ್ದರು.

ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನಿತ್ತು ಸದ್ಗತಿಯನ್ನೀಯಲಿ ಎಂದು ಹಾರೈಸುವ, ಎಲ್ಲರಿಗೂ ದುಃಖ ಸಹಿಸುವ ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಬೇಡಿಕೊಳ್ಳುವ–

**ನಿನ್ನ ಪತಿ ಎನ್. ಗೋಪಾಲಕೃಷ್ಣ ರಾವ್ ಹಾಗೂ**
**ಅಪಾರ ಆಪ್ತೇಷ್ಟರು, ಬಂಧು–ಬಳಗ ಸಹೋದರ– ಸಹೋದರಿಯರು**
**ಮತ್ತು ನಿನ್ನ ಪ್ರೀತಿಯ ಅಣ್ಣ ಎ. ಪಿ. ಉಮಾಕಾಂತ ಶರ್ಮ**
**ವ್ಯಾಸನಗರ, ಮಂಗಳೂರು**

**ಓಂ ಶಾಂತಿ ॥ ಓಂ ಶಾಂತಿ ॥ ಓಂ ಶಾಂತಿಃ**


Prop. : *Kishore Kumar Kedige* Ph. : 2231524
M. : 9880726325



**KYADIGE AUTOMOBILES**

**Opp. to D. P. Stores Main Road, B. C. Road, Bantwal Tq.**

*Dealers in : 2 & 3 WHEELERS SPARES*





ಪತ್ರಿಕೆಗೆ ಶುಭ ಬಯಸುವ– ಮೊಬೈಲ್ : 9972989678
9448104174

**ರವಿಕಿರಣ್ ಕ್ರೈಲ,** ಬಿ.ಎ., ಎಲ್‌ಎಲ್.ಬಿ.
**ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)**
**2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ**
**ಪುತ್ತೂರು ತಾಲೂಕು, ದ. ಕ., 574 241**



ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**








ಪತ್ರಿಕೆಗೆ ಶುಭ ಬಯಸುವ–



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**


## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...




ಪಡುಬಿದ್ರಿ ಬಿ. ಸುಬ್ಬರಾವ್‌ರವರ ಪತ್ನಿ **ಶ್ರೀಮತಿ ಜಾನಕಿ** (84)ರವರು ತಾರೀಕು 27–01–2021ನೇ ಬುಧವಾರ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖ ❖ ❖



ಕದ್ರಿ ಶ್ರೀ ಮಂಜುನಾಥೇಶ್ವರ ದೇವಸ್ಥಾನದಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ **ಶ್ರೀ ಸದಾನಂದ ರಾವ್**ರವರು (68) ತಾರೀಕು 24–1–2021ನೇ ಆದಿತ್ಯವಾರ ಕದ್ರಿಯ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಪುತ್ರ, ಮಗಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖ ❖ ❖



**ಸಾಂತೂರ್ ಶ್ರೀನಿವಾಸ್ ಶಾಸ್ತ್ರಿ** (67) ಇವರು ತಾರೀಕು 29–1–2021ರ ಶುಕ್ರವಾರ ಪಾದೆಬೆಟ್ಟುವಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಮಗಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***



ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
**ಹಾಗೂ**
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**



# 'ಶ್ರೀ ಸುಬ್ರಹ್ಮಣ್ಯ ಸಭಾ' ಕಿರುಪ್ರವಾಸ

## ರಿವರ್ ರ್‍ಯಾಸ್ಟ್ ರೆಸೋರ್ಟ್, ಪಿಲಿಕುಳ

ಜನವರಿ ತಿಂಗಳ 23ರಂದು ನಮ್ಮ ಸದನದ ಪ್ರವಾಸಕ್ಕೆಂದು ಬೆಳಗ್ಗೆ ಒಂಬತ್ತು ಗಂಟೆಗೆ ಸದನದಲ್ಲಿ ಒಂದುಗೂಡಿದೆವು. ತಮ್ಮ ತಮ್ಮ ಕಾರಿನಲ್ಲೇ ಹೋಗುವುದೆಂದು ನಿಶ್ಚಯಿಸಲಾಗಿತ್ತು. ಸ್ವಂತ ವಾಹನ ಇಲ್ಲದವರು ಇತರರ ಕಾರಿನಲ್ಲಿ ಸೇರಿಕೊಂಡರು. ಇನ್ನು ಕೆಲವರು ಪಿಲಿಕುಳಕ್ಕೆ ನೇರವಾಗಿ ಬಂದರು. ಕೋವಿಡ್ ಕಾರಣ ಬರೇ 32 ಜನ. ಶ್ರೀ ಮನೀಷ್ ರಾವ್ ನಾಯಕತ್ವದಲ್ಲಿ ಸಾಲಾಗಿ ಕಾರುಗಳು ವಾಮಂಜೂರು ಕಡೆಗೆ ಹೊರಟವು. ಸುತ್ತಲೂ ಕಾಡುಗುಡ್ಡೆಗಳು ತಂಪಾದ ಹವಾಮಾನ ಪಿಲಿಕುಳದಲ್ಲಿ ಎಲ್ಲರೂ ಒಟ್ಟಾಗಿ ಶ್ರೀಮತಿ ಸ್ನೇಹಲತಾರವರ ಗುರುಸ್ತುತಿಯೊಂದಿಗೆ ಕಾರುಗಳು ಸಾಲಾಗಿ ನಿಸರ್ಗಧಾಮದ ಕಡೆಗೆ ಸಾಗಿದವು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್ ಎಲ್ಲರನ್ನು ಸ್ವಾಗತಿಸಿದರು. ಕಲಾನಿಧಿಯವರ ಮಗಳಿಂದ ಪ್ರಾರ್ಥನೆ, ಬಳಿಕ ಶ್ರೀಮತಿ ಸರೋಜ ಅವರು ತಮ್ಮ ಹುಟ್ಟುಹಬ್ಬವನ್ನು ತನ್ನ ಪತಿ, ಮಗಳು, ಮಗನೊಂದಿಗೆ ಆಚರಿಸಿದರು. ಆಕೆ ಚಿಗುರುವ ತುಳು ಕನ್ನಡ ಚಿತ್ರ ಕಲಾವಿದೆ. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಯುವವೇದಿಕೆಯ ಅಧ್ಯಕ್ಷ ಶ್ರೀ ಮನೀಷ್ ರಾವ್‌ರವರು ಆಕೆಗೆ ಹಾಗೂ ಅವರ ಕುಟುಂಬಕ್ಕೆ ಶುಭಹಾರೈಸಿದರು. ಎಲ್ಲರೂ ಹಾಡಿನ ಮೂಲಕ ಶುಭಕೋರಿದರು. ಆಮೇಲೆ ಶ್ರೀ ಕರುಣ್ ರಾವ್ ಬೆಳ್ಳೆಯವರ ರಾಗಿಯ ಹಾಲುಬಾಯಿ, ಮಹಿಳಾವೇದಿಕೆಯವರ ಚಕ್ಕುಲಿ ಚಹಾದೊಂದಿಗೆ ಲಘು ಉಪಾಹಾರವಾಯಿತು.






ಆಮೇಲೆ ಎಲ್ಲರೂ ಅವರವರಿಗೆ ಬೇಕಾದ ಆಟ, ಜೋಕಾಲಿ, ಈಜುಕೊಳದಲ್ಲಿ ಈಜಾಟ, ಕೇರಂ ಆಟಗಳು, ಸುತ್ತಲೂ ಸುತ್ತಾಟ ಸುರುವಾಯಿತು. ಮಹಿಳೆಯರು ನದೀತಟದ ದಂಡೆಯಲ್ಲಿ ಸುತ್ತಾಡುತ್ತಾ ಭಜನೆ, ಜಾನಪದ ಹಾಡುಗಳನ್ನು ಹಾಡಿಕೊಂಡರು. ತಮಗೆ ತಾವೇ ಸಂತೋಷಪಡುತ್ತಾ ಪಿಲಿಕುಣಿತ, ಜಾನಪದ ಕುಣಿತಗಳಲ್ಲಿ ಹೆಜ್ಜೆ ಹಾಕಿದರು. ಮಕ್ಕಳು ಕೃತಕ ಮಳೆಯಲ್ಲಿ ಹಾಡಿಗೆ ಹೆಜ್ಜೆ ಹಾಕುತ್ತಾ ಕುಣಿದರು. ಬಾಲ–ಬಾಲೆಯರು, ಯುವಕ–ಯುವತಿಯರು, ವೃದ್ಧರು, ಎಲ್ಲರೂ ತಮಗೆ ಬೇಕಾದ ಆಟಗಳನ್ನು ಆಡಿ ಸಂಭ್ರಮಿಸಿದರು. ಮಧ್ಯಾಹ್ನ ಒಂದೂವರೆಗೆ ಅಂದು ಏಕಾದಶಿಯಾದರೂ ಚಪಾತಿ, ಪನ್ನೀರ್ ಹೂಕೋಸಿನ ಮಂಚೂರಿ, ತುಪ್ಪದ ಅನ್ನ, ಕುಚ್ಚಲನ್ನ, ಸಾರು, ತೋವೆ, ಹಪ್ಪಳ, ಮೊಸರಿನೊಂದಿಗೆ ಸಲಾಡ್ ಸೇರಿಸಿ ಸವಿದು ಉಂಡರು. ಸ್ವ–ಸಹಾಯ ಪದ್ಧತಿಯಲ್ಲಿ ನದೀ ದಂಡೆಯಲ್ಲಿ ಎಲ್ಲಾ ಸೇರಿಸಿ ಹೊಂದಿಸಿ ಇಟ್ಟಿದ್ದರು. ರುಚಿಕರವಾದ ಭೋಜನದ ಅನಂತರ ಐಸ್‌ಕ್ರೀಮ್ ಸವಿದೆವು. ಎಲ್ಲರೂ ರಿಲಾಕ್ಸ್ ಆದಮೇಲೆ ಹಸುರು ಹುಲ್ಲಿನ ಹಾಸಿನ ಮೇಲೆ ಕುರ್ಚಿಗಳನ್ನು ಹಾಕಿ ಎಲ್ಲರನ್ನೂ ಸೇರಿಸಿದರು. ಮೇಲೆ ಮುಳಿಹುಲ್ಲಿನ ಮೇಲ್‌ಹೊದಿಕೆ ಇತ್ತು. ಮಕ್ಕಳೆಲ್ಲಾ ಅಟ್ಟದ ಹಾಗಿನ ಚಪ್ಪರದಲ್ಲಿ ಕುಳಿತು ಹೌಸಿ ಹೌಸಿ ಆಡಿದರು. ಎಲ್ಲರಿಗೂ ಉಚಿತ ಟಿಕೇಟ್‌ನೊಂದಿಗೆ ಚಾಕಲೇಟ್, ಚಕ್ಕುಲಿ, ಎಳ್ಳುಂಡೆಗಳೇ ಬಹುಮಾನ. ಶ್ರೀಮತಿ ಸುಮಂಗಲಾ, ಶ್ರೀಮತಿ ಪುಷ್ಪ, ಶ್ರೀಮತಿ ಶ್ರೀಲತಾ, ಶ್ರೀಮತಿ ಕಲಾನಿಧಿ, ಶ್ರೀಮತಿ ವಲ್ಲಿ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಬಹುಮಾನ ವಿತರಣೆ ಬಳಿಕ ಸಂಜೆಯಾಗುತ್ತಲೇ ಸುತ್ತಾಡಲು ಹೋದವರೆಲ್ಲಾ ಬಿಸಿ ಬಿಸಿ ಪೋಡಿಯ ಪರಿಮಳದ ಆಕರ್ಷಣೆಗೆ ಒಟ್ಟುಸೇರಿ ಚಹಾ, ಕಾಫಿಯೊಂದಿಗೆ ಸಂತೋಷಪಟ್ಟರು. ಸಾಕಾಗುವಷ್ಟು ಫೋಟೋ ಕ್ಲಿಕ್ಕಿಸಿಕೊಂಡರು. ಎಲ್ಲರಿಗೂ ಧನ್ಯವಾದಗಳೊಂದಿಗೆ, ತಮ್ಮ ತಮ್ಮ ಕಾರುಗಳಲ್ಲಿ ವಿದಾಯ ಹೇಳುತ್ತಾ ಮಂಗಳೂರಿನತ್ತ ಸಾಗಿದರು. ಐದೂವರೆ ಮೊದಲು ಎಲ್ಲರೂ ಮನೆ ಸೇರಿದರು.

**ವರದಿ : ಶ್ರೀಮತಿ ಸ್ನೇಹಲತಾ ದಿವಾಕರ್ ✆ : 7022737312**

# ಸಂಸ್ಕೃತ ಪ್ರಚಾರ ಏಕೆ, ಹೇಗೆ? ಒಂದು ಚಿಂತನೆ

ಸಂಸ್ಕೃತವಾಙ್ಮಯದ ಚೈತನ್ಯದಾಯಕ ಗುಣ ಇಂದು ದೇವಸ್ಥಾನಗಳಲ್ಲಿ, ಮಠ ಸಂಪ್ರದಾಯಗಳಲ್ಲಿ ಮಾತ್ರ ಉಳಿಯಲ್ಪಟ್ಟು ಅದರ ಅರ್ಥ ಮಾತ್ರ ತಿಳಿಯದಾಗಿದೆ. ಸ್ತೋತ್ರ–ಮಂತ್ರಗಳ ವಿಶಿಷ್ಟ ಮಹಿಮೆ ಕರ್ಣಾನಂದಕರವೂ ಹೌದು, ಬ್ರಹ್ಮಾನಂದ ಪಡೆಯಲು ಸೆಳೆಯುವುದೂ ಹೌದು. ಆದರೆ ಅರ್ಥ ತಿಳಿದಾಗ ಮಾತ್ರ ದೇವಸ್ಥಾನಗಳಲ್ಲಿನ ಅರ್ಚಕ ವರ್ಗ, ಗುರುಹಿರಿಯ ವರ್ಗ ಇದನ್ನು ತಿಳಿದು ಅರ್ಥೈಸಿಕೊಂಡು ತಮ್ಮ ಬೌದ್ಧಿಕ ಶ್ರೀಮಂತಿಕೆಯನ್ನು ಬೆಳೆಸಿಕೊಂಡು ಮಾರ್ಗದರ್ಶಕರಾಗಬೇಕಿದೆ. ನಮ್ಮನ್ನು ಕ್ರೈಸ್ತ, ಇಸ್ಲಾಂ ಮತಪ್ರಚಾರಕರ ಪ್ರಚಾರದ ಹಿನ್ನೆಲೆಯಲ್ಲಿ ಹಿಂದೂಗಳಾಗಿ ಉಳಿಸಿಕೊಳ್ಳಬೇಕಾದರೆ ಈ ಅರ್ಚಕ ವಿದ್ಯಾವಂತವರ್ಗ ಸ್ವಲ್ಪವಾದರೂ ಸಂಸ್ಕೃತದ ಹಿರಿಮೆಯನ್ನು ಅರಿತು ಅಧ್ಯಯನ ಮಾಡಿ ಬೇರೆ ಬೇರೆ ಚರ್ಚೆ, ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸಿ ನಮ್ಮ ಧರ್ಮದ ಹಿರಿಮೆಯನ್ನು ಪುನರ್‌ಸ್ಥಾಪಿಸಬೇಡವೇ? ಬೇರೆ ಬೇರೆ ಧರ್ಮದವರು ನಮ್ಮ ವಿಷಯಗಳನ್ನು ತಿಳಿದು ಅದಕ್ಕೆ ಪ್ರತಿಯಾಗಿ ವಾದ ಹೂಡುತ್ತಾರೆ. ನಮ್ಮಲ್ಲಿ ತಿಳಿದವರು ನಮ್ಮ ಧಾರ್ಮಿಕ ಪರಂಪರೆಯನ್ನು ಅದರೊಂದಿಗೆ ಹೋಲಿಸಿ ಅದರ ಶ್ರೇಷ್ಠತೆಯ ಬಗ್ಗೆ ಮಾತನಾಡಿ ಹೀಗಳೆಯದಂತೆ ಮಾಡಬೇಕಾಗಿದೆ. ಹೊಸದೊಂದು ವರ್ಗ ಸಂಸ್ಕೃತದ ಬಗೆಗೆ ನಿಜವಾದ ಅಭಿಮಾನವಿಟ್ಟು ಅದರಲ್ಲಿರುವ ವಿಚಾರವನ್ನು ಹೊರತರುವ ಕೆಲಸ ಮಾಡಬೇಕಾಗಿದೆ. ಆ ಅರ್ಚಕ ವಿದ್ಯಾವಂತ ಪೌರೋಹಿತ್ಯ ವರ್ಗ ಬೈಬಲ್, ಕುರಾನ್‌ಗಳನ್ನು ಅಭ್ಯಾಸ ಮಾಡಿ ಅದರಲ್ಲಿರುವ ಕೊರತೆಗಳನ್ನು ನಮ್ಮ ಭಗವದ್ಗೀತೆ ಉಪನಿಷತ್ತುಗಳು ಹೇಗೆ ತುಂಬುತ್ತವೆ ಎಂಬುದನ್ನು ತಿಳಿಸುವಂತಿರಬೇಕು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಸಂಸ್ಕೃತದಲ್ಲಿರುವ ನಮ್ಮ ಸಾಹಿತ್ಯ ಎಂದೆಂದೂ ಮೂಲಭೂತವಾದಿಯಾದುದಾಗಿರಲಿಲ್ಲ ಅಂತಹ ಫಂಡಮೆಂಟಲಿಸಂ ಭಾರತೀಯ ಆರ್ಷೇಯ ಸಂಸ್ಕೃತಿಗೂ, ಧರ್ಮಕ್ಕೂ ಅನ್ವಯಿಸುವುದಿಲ್ಲ ಎಂಬುದನ್ನು ತೋರಿಸಬೇಕಾಗಿದೆ. ನಮ್ಮ ಸ್ವಂತ ಮನಸ್ಸಿನ ಮೇಲೆ ಕಟ್ಟಿದ ನವಭಾರತದ ಸೌಧಕ್ಕೆ ಸಂಸ್ಕೃತದ ಇಟ್ಟಿಗೆಗಳನ್ನು ಧಾರಾಳವಾಗಿ ಉಪಯೋಗಿಸಬೇಕಾಗಿದೆ.

ಸ್ತ್ರೀಯರನ್ನು ಸಂಸ್ಕೃತ ಓದುವಂತೆ ಸಂಸ್ಕೃತದಲ್ಲಿ ಸಂಭಾಷಣೆ ನಡೆಸುವಂತೆ ಪ್ರೋತ್ಸಾಹಿಸಿದರೆ ಬಹುಶಃ ಸಂಸ್ಕೃತದ ಪ್ರಚುರತೆ ಹೆಚ್ಚಿ ಸಂಸ್ಕೃತ ಸರಸ್ವತಿ ಭಾರತೀಯರ ಹೃದಯದಲ್ಲಿ ಪುನರ್‌ಸ್ಥಾಪಿತವಾಗಬಹುದು.

**– ಎಂ. ಆರ್. ವಾಸುದೇವ, ಅಧ್ಯಕ್ಷರು, ಸಂಸ್ಕೃತ ಭಾರತಿ – ಮಂಗಳೂರು**

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001



Muralidhara Rao Adyapadi
Proprietor
Mob : 94480 27259
99803 16434
**SPANDANA**
Constructions



IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

# ಘಂಟೆಯ ಪರಂಪರೆ

ನಮ್ಮ ಪರಂಪರೆಯಲ್ಲಿ ಘಂಟೆಗೆ ಮಹತ್ತರವಾದ ಹಾಗೂ ಪವಿತ್ರವಾದ ಸ್ಥಾನವಿದೆ. 'ಘ' ಎಂಬ ಅಕ್ಷರವನ್ನು ಬರೆಯುವುದೂ ಕಷ್ಟ ಹಾಗೂ ಉಚ್ಚರಿಸುವುದೂ ಕಷ್ಟ. ಈಗ ಅದು ಗಂಟೆ ಎಂದೇ ಜನಸಾಮಾನ್ಯರ ಬಾಯಲ್ಲಿ ಕೇಳಿಬರುತ್ತಿದೆ. ಅದು ಹೇಗಾದರೂ ಕೂಡ ಅದರ ಪವಿತ್ರಸ್ಥಾನ ಮನೆಯ ಪೂಜಾಗೃಹದಲ್ಲಿ ಹಾಗೂ ದೇವಾಲಯಗಳಲ್ಲಿ ಮುಂದುವರಿದೇ ಇದೆ. ಸಮಯವನ್ನು ಸೂಚಿಸುವ ಪದಕ್ಕಿಂತ ಇದು ಭಿನ್ನವಾದ ಅರ್ಥದಲ್ಲಿ ಬಳಕೆಯಲ್ಲಿದೆ. ಮನೆಯಲ್ಲಿಯೂ ಕೂಡ ಪೂಜೆಯನ್ನು ಆರಂಭಿಸುವುದಕ್ಕೆ ಮುಂಚೆ ಘಂಟೆಯನ್ನು ಬಾರಿಸುತ್ತಾರೆ. ಸಾಮಾನ್ಯವಾಗಿ ಪೂಜಾರಂಭದಲ್ಲಿ **'ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಾಕ್ಷಸಾಮ್'** ಎಂದು ಮಂತ್ರವನ್ನು ಹೇಳುತ್ತಾರೆ. ಅಂದರೆ ಘಂಟೆಯ ಶಬ್ದ ಮಾಡಿದರೆ ರಾಕ್ಷಸ ಶಕ್ತಿಗಳು ಹೊರಹೋಗಲಿ ಮತ್ತು ದೈವೀಶಕ್ತಿಗಳು ಒಳಕ್ಕೆ ಬರಲಿ ಎಂಬುದೇ ಇದರ ಅರ್ಥ. ಆದುದರಿಂದ ಮಾಡುವ ಪೂಜಾ ಕಾರ್ಯಕ್ಕೆ ಒಂದು ಸಮರ್ಪಕವಾದ ಸನ್ನಿವೇಶವನ್ನು ಸೃಷ್ಟಿಮಾಡುವುದೇ ಇದರ ಮುಖ್ಯ ಉದ್ದೇಶ, ಘಂಟೆಯಿಲ್ಲದೆ ಮಾಡಿದ ಪೂಜೆ ಪೂಜೆಯೇ ಆಗುವುದಿಲ್ಲ ಎಂಬ ಇನ್ನೊಂದು ಶಾಸ್ತ್ರದ ಮಾತು ಇದನ್ನೇ ಸೂಚಿಸುತ್ತದೆ.

ಪುರಾಣಗಳ ಪ್ರಕಾರ, ಬ್ರಹ್ಮ, ವಿಷ್ಣು, ಮಹೇಶ್ವರ ಘಂಟೆಯಲ್ಲಿ ವಾಸಿಸುತ್ತಾರೆ. ಇನ್ನೊಂದು ಪಠ್ಯದ ಪ್ರಕಾರ ಘಂಟೆಯೇ ಬ್ರಹ್ಮನ ಸಂಕೇತವಾದರೆ, ಅದರಲ್ಲಿರುವ ನಾಲಗೆ ಸರಸ್ವತಿಯ ಸಂಕೇತ. ಒಬ್ಬ ಋಷಿಯು ಒಮ್ಮೆ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ, ತಾನು ಯಾವಾಗಲೂ 'ಓಂ' ಎಂಬ ನಾದವನ್ನೇ ಕೇಳುವಂತೆ ಅನುಗ್ರಹಿಸು ಎಂದು ಕೇಳಿದನಂತೆ. ಆಗ ಬ್ರಹ್ಮನು ಅವನ ತಪಸ್ಸಿಗೆ ಮೆಚ್ಚಿ ಒಂದು ಘಂಟೆಯನ್ನು ಸೃಷ್ಟಿಸಿ ಅವನಿಗೆ ಕೊಟ್ಟನು. ನೀನು ಯಾವಾಗ ಬೇಕಾದರೂ ಈ ಘಂಟೆಯನ್ನು ಬಾರಿಸಿ 'ಓಂ' ಎಂಬ ಶಬ್ದವನ್ನು ಕೇಳಬಹುದು ಎಂದು ಹೇಳಿದನು. ಆದುದರಿಂದ ಒಳ್ಳೆಯ ಘಂಟೆಯಿಂದ ಹೊರಹೊಮ್ಮಬೇಕಾದುದು ಓಂಕಾರ. ಅಂತಹ ಘಂಟೆಯನ್ನು ಮಾತ್ರ ಮನೆಯಲ್ಲಿ ಹಾಗೂ ದೇವಾಲಯಗಳಲ್ಲಿ ಬಳಸಬೇಕು ಎಂಬುದು ತಾತ್ಪರ್ಯ. ಘಂಟೆಯನ್ನು ಪಂಚಮ ಶಬ್ದಗಳಲ್ಲಿ ಮುಖ್ಯವಾದುದೆಂದು ಭಾವಿಸಲಾಗಿದೆ.

ಶಿಲ್ಪ ಮತ್ತು ಆಗಮಶಾಸ್ತ್ರದ ಗ್ರಂಥಗಳು ಘಂಟೆಯನ್ನು ತಯಾರು ಮಾಡಬೇಕಾದಾಗ ಅನುಸರಿಸಬೇಕಾದ ನಿಯಮಗಳನ್ನು ವಿವರಿಸುತ್ತವೆ. ಪಂಚಲೋಹ ಮಿಶ್ರಣದಿಂದ ತಯಾರಿಸಿದ ಘಂಟೆಗಳೇ ಪೂಜಾರ್ಹ. ಏಕೆಂದರೆ ಅವು ಉತ್ತಮ ಶಬ್ದವನ್ನು ನೀಡುತ್ತವೆ. ಘಂಟೆಗಳನ್ನು ಅವುಗಳ ಅಳತೆಗೆ ತಕ್ಕಂತೆಯೂ ವಿಭಾಗಿಸಲಾಗಿದೆ. ದೊಡ್ಡ ಅಳತೆಯ ಘಂಟೆಗಳನ್ನು ದೇವಾಲಯಗಳಲ್ಲಿ ಬಳಸಬಹುದು. ಆದರೆ ಮನೆಯಲ್ಲಿ ಉಪಯೋಗಿಸುವ ಘಂಟೆಗಳು ಪ್ರಮಾಣದಲ್ಲಿ ಸಣ್ಣದಾಗಿರಬೇಕು. ಅವು ಮನೆಯ ಯಜಮಾನನ ಮುಖದ ಉದ್ದಕ್ಕಿಂತ ಹೆಚ್ಚು ಇರಬಾರದು ಎಂಬುದು ಒಂದು ಗ್ರಂಥದ ಅಭಿಪ್ರಾಯ. ಅಂದರೆ ಅವು ಸುಮಾರು ಎಂಟು – ಹತ್ತು ಅಂಗುಲಗಳ ಪ್ರಮಾಣದವುಗಳಾಗಿರಬೇಕು ಎಂಬುದು ತಾತ್ಪರ್ಯ. ಆದರೆ ಇತ್ತೀಚೆಗೆ ತಮ್ಮ ಶ್ರೀಮಂತಿಕೆಯನ್ನು ಪ್ರದರ್ಶಿಸಲು ಧನಿಕರು ದೊಡ್ಡ ಪ್ರಮಾಣದ ಬೆಳ್ಳಿಯ ಘಂಟೆಗಳನ್ನು ಉಪಯೋಗಿಸುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಘಂಟೆಯ ಮೇಲ್ತುದಿಯಲ್ಲಿ ಉಪಯೋಗಿಸುವವರ ಜಾತಿಗೆ ತಕ್ಕಂತೆ ನಂದಿ, ಗರುಡ, ಹನುಮಂತ, ಚಕ್ರ, ಪದ್ಮ ಮುಂತಾದವುಗಳು ಇರುತ್ತವೆ.

ದೇವಾಲಯಗಳಲ್ಲಿ ಹತ್ತಾರು ಘಂಟೆಗಳನ್ನು ಸೂರಿನಿಂದ ತೂಗುಹಾಕಿರುತ್ತಾರೆ. ಬಂದ ಭಕ್ತರು ಶಬ್ದ ಮಾಡುತ್ತಾರೆ. ಇತ್ತೀಚೆಗೆ ಅನೇಕ ದೇವಾಲಯಗಳಲ್ಲಿ ವಿದ್ಯುಚ್ಛಕ್ತಿಯಿಂದ ಚಲಿಸುವ ಅಂದರೆ ಘಂಟಾನಾದ ಮಾಡುವ ಯಂತ್ರಗಳನ್ನು ಅಳವಡಿಸಿರುವುದನ್ನು ಕಾಣಬಹುದು. ಬೌದ್ಧ ಧರ್ಮದಲ್ಲಿಯೂ ಘಂಟೆಗಳಿಗೆ ಮಹತ್ವವಿದೆ. ಬೌದ್ಧ ಸ್ತೂಪಗಳನ್ನು ಘಂಟೆಯಾಕಾರದಲ್ಲಿ ನಿರ್ಮಿಸಿರುವುದು ಸಾಮಾನ್ಯ. ಕ್ರೈಸ್ತರ ಚರ್ಚ್‌ಗಳಲ್ಲಿಯೂ ವಿವಿಧ ರೀತಿಯ ತೂಗುಘಂಟೆಗಳಿರುತ್ತವೆ.

ಪ್ರಪಂಚದಾದ್ಯಂತ ವಿವಿಧ ಗಾತ್ರದ ಘಂಟೆಗಳನ್ನು ಕಾಣಬಹುದು. ಕೆಲವು ರಾಜರು ಬೃಹತ್ ಪ್ರಮಾಣದ ಘಂಟೆಗಳನ್ನು ತಯಾರಿಸಿ ಖ್ಯಾತಿ ಪಡೆದಿದ್ದಾರೆ. 1733ರಲ್ಲಿ ರಷ್ಯಾದಲ್ಲಿ ತಯಾರಿಸಲಾದ ಘಂಟೆಯನ್ನು ಕಂಚಿನಿಂದ ಮಾಡಿದ್ದಾರೆ. ಇದರ ತೂಕ 193 ಟನ್, ಇದು 19 ಅಡಿ ಎತ್ತರವಾಗಿದ್ದು ಇದರ ವ್ಯಾಸ 23 ಅಡಿಗಳು. ದುರದೃಷ್ಟವಶಾತ್ ಈ ಘಂಟೆಯನ್ನು ಸಾಗಿಸುವಾಗ ಇದು ಭಿನ್ನ ವಾಯಿತು. ಆದುದರಿಂದ ಇದರ ನಾದವನ್ನು ಯಾರೂ ಕೇಳಲಾಗಲಿಲ್ಲ. ಮಾಸ್ಕೋದಲ್ಲಿ ಇನ್ನೊಂದು ಘಂಟೆಯಿದೆ. ಇದರ ತೂಕ 110 ಟನ್. ಪೀಕಿಂಗ್‌ನಲ್ಲಿರುವ ಒಂದು ಘಂಟೆಯ ತೂಕ 53 ಟನ್. ಪ್ರಖ್ಯಾತಿಯನ್ನು ಪಡೆದಿರುವ ವೆಸ್ಟ್ ಮಿನಿಸ್ಟರ್‌ಗೆ ಸೇರಿದ 'ಬಿಗ್ ಬಿನ್' ತೂಕ ಕೇವಲ 12 ಟನ್, ನ್ಯೂಯಾರ್ಕ್‌ನ ಮೆಟ್ರೋಪೋಲಿಟಿನ್ ಲೈಫ್ ಅನ್ಶೂರೆನ್ಸ್‌ನ 700 ಅಡಿ ಎತ್ತರದ ಕಟ್ಟಡದಲ್ಲಿ ಅನೇಕ ದೊಡ್ಡ ಪ್ರಮಾಣದ ಘಂಟೆಗಳಿವೆ. ಇದರಿಂದ ಹೊರಹೊಮ್ಮುವ ಶಬ್ದ 28 ಮೈಲಿಯ ವರೆಗೆ ಕೇಳಿಬರುತ್ತದೆ ಎನ್ನುವ ಮಾಹಿತಿ ಮಾತ್ರ ಇದೆ.

ಮೈಸೂರಿನ ಪುರಸಭಾ ಭವನದ ಎದುರು ದೊಡ್ಡ ಗಡಿಯಾರವಿದೆ. ಇದು ಎತ್ತರವಾದ ಶಿಖರದ ತುದಿಯಲ್ಲಿದೆ. 1927ರಲ್ಲಿ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕ ಮಹೋತ್ಸವದ ಬೆಳ್ಳಿಹಬ್ಬದ ಸಮಯದಲ್ಲಿ ಇದನ್ನು ಸ್ಥಾಪಿಸಲಾಯಿತು. ಇದರ ಎತ್ತರ 90 ಅಡಿಗಳು. ಈ ಹಿಂದೆ ಇದು ಪ್ರತಿ ಗಂಟೆಯ ಸಮಯಕ್ಕೆ ಸರಿಯಾಗಿ ಘಂಟೆಯ ನಿನಾದವನ್ನು ಮಾಡುತ್ತಿತ್ತು. ಈಗ ಇದು ನಿಂತುಹೋಗಿದೆ. ನಮ್ಮ ನಗರದವರೇ ಆದ ಗಡಿಯಾರದ ವಿಷಯದಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ಶ್ರೀ ಚಂದ್ರಶೇಖರ ಅಯ್ಯರ್‌ರವರ ಈ ದೊಡ್ಡ ಗಡಿಯಾರ ಮತ್ತು ಘಂಟಾನಾದವನ್ನು ಮಾಡಲು ಸಾಕಷ್ಟು ಆಸಕ್ತಿ ವಹಿಸಿದರೂ ಕೂಡ ಅದರ ಪ್ರಯತ್ನಗಳಿಗೆ ಸಫಲತೆ ಸಿಕ್ಕದೇ ಇರುವುದು ಸರ್ಕಾರದ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿ ಎಂದೇ ಭಾವಿಸಬೇಕಾಗುತ್ತದೆ. ವಾಣಿವಿಲಾಸ ಮಾರ್ಕೆಟ್ (ಅಗ್ರಹಾರ)ನಲ್ಲಿ ಇನ್ನೊಂದು ಗಡಿಯಾರವಿದೆ. ಇದನ್ನು ಚಿಕ್ಕ ಗಡಿಯಾರವೆಂದು ಕರೆಯುತ್ತಾರೆ. ಮತ್ತೊಂದು ಗಡಿಯಾರವು ದೇವರಾಜ ಮಾರ್ಕೆಟ್ ಪ್ರದೇಶದ ಮುಂಭಾಗದಲ್ಲಿದೆ. ಭಾರತೀಯ ವಿದ್ಯಾಭವನಗಳ ಹಾಲಿ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರು ಎಚ್.ಎಂ.ಟಿ. ಸಂಸ್ಥೆಯ ಅಧ್ಯಕ್ಷರಾಗಿದ್ದರು. ಆಗ ಅವರು ನೂರಾರು ದೇವಾಲಯಗಳಲ್ಲಿ ದೊಡ್ಡ ಗಡಿಯಾರಗಳನ್ನು ಅಳವಡಿಸಿದ್ದರು. ಇಂತಹ ಒಂದು ದೊಡ್ಡ ಗಡಿಯಾರ ಬೆಂಗಳೂರು ನಗರದ ರಾಜರಾಜೇಶ್ವರೀ ನಗರದ ಬಡಾವಣೆಯಲ್ಲಿರುವ ದೇವಾಲಯದಲ್ಲಿದೆ. ಇದು ಪ್ರತಿ ಘಂಟೆಯ ಸಮಯವನ್ನು ತೋರಿಸುವಾಗ 'ಓಂ' ಎಂಬ ಶಬ್ದವನ್ನು ಮಾಡುತ್ತದೆ. ಇದನ್ನು ಕೇಳಲು ನೂರಾರು ಜನ ಕಾಯುತ್ತಿರುತ್ತಾರೆ.

ಪ್ರಾಚೀನ ಕಾಲದ ರಾಜ ಮಹಾರಾಜರು ತಮ್ಮ ಅರಮನೆಯ ಮುಂಭಾಗದಲ್ಲಿ ಚಿನ್ನದ ಘಂಟೆಯನ್ನು ಸ್ಥಾಪಿಸಿದ್ದರು. ನ್ಯಾಯವನ್ನು ಬಯಸುವ ಯಾವ ನಾಗರಿಕನಾದರೂ ಈ ಘಂಟೆಯನ್ನು ಬಾರಿಸಿ, ರಾಜನ ಗಮನವನ್ನು ಸೆಳೆಯಬಹುದಾಗಿತ್ತು. ಅಶೋಕನು ತನ್ನ ಅರಮನೆಯ ಮುಂಭಾಗದಲ್ಲಿ ಈ ರೀತಿಯ ಘಂಟೆಯನ್ನು ಅಳವಡಿಸಿ, ಅವನೇ ಹೇಳಿರುವಂತೆ ದಿನದ ಯಾವ ಹೊತ್ತಿನಲ್ಲಾಗಲೀ ಅವನು ಅಂತಃಪುರದಲ್ಲಿರಲಿ, ಊಟ ಮಾಡುತ್ತಿರಲಿ, ಇಲ್ಲವೇ ಸಖಿಯರೊಡನೆ ಉದ್ಯಾನದಲ್ಲಿರಲಿ ಪ್ರಜೆಗಳು ಈ ಘಂಟೆಯನ್ನು ಬಾರಿಸಿ ನ್ಯಾಯವನ್ನು ಕೇಳಬಹುದಾಗಿತ್ತು. ವಿಕ್ರಮಾದಿತ್ಯ ರಾಜನೂ ಈ ರೀತಿಯ ಒಂದು ಚಿನ್ನದ ಘಂಟೆಯನ್ನು ತನ್ನ ಅರಮನೆಯ ಪ್ರವೇಶ ದ್ವಾರದಲ್ಲಿ ಸ್ಥಾಪಿಸಿದ್ದನು.

ಮುಘಲ್ ಚಕ್ರವರ್ತಿ ಜಹಾಂಗೀರ್ ಕೂಡ ಈ ರೀತಿಯ ಏರ್ಪಾಟುಗಳನ್ನು ಮಾಡಿದ್ದನು. ಇವನು 90 ಅಡಿ ಉದ್ದದ ಚಿನ್ನದ ಸರಪಳಿಯನ್ನು ಮಾಡಿಸಿ ಅದಕ್ಕೆ 60 ಚಿನ್ನದ ಘಂಟೆಗಳನ್ನು ಸೇರಿಸಿದ್ದನು. ಈ ಸರಪಳಿಯ ಒಂದು ತುದಿಯು ಆಗ್ರಾ ಕೋಟೆಗೂ ಇನ್ನೊಂದು ತುದಿಯು ಯಮುನಾ ನದಿಯ ತೀರಕ್ಕೂ ಸೇರಿಸಲ್ಪಟ್ಟಿತ್ತು. ಅಧಿಕಾರಿಗಳಿಂದ ನ್ಯಾಯ ದೊರಕದೇ ಇದ್ದ ಪ್ರಜೆಗಳು ಈ ಘಂಟೆಗಳನ್ನು ಸದ್ದು ಮಾಡಿದರೆ, ಜಹಾಂಗೀರನೇ ಬಂದು ನ್ಯಾಯ ತೀರ್ಮಾನ ಮಾಡುತ್ತಿದ್ದನು. ಇದರಿಂದ ಜನಗಳು ಅವನನ್ನು ವಿಶೇಷವಾಗಿ ಪ್ರಶಂಸಿಸುತ್ತಿದ್ದರು. ಸಾಲೋಮನ್ (974–934) ಜೆರೂಸಲೇಂನಲ್ಲಿ ಒಂದು ದೇವಾಲಯವನ್ನು ನಿರ್ಮಿಸಿ, ಅದರಲ್ಲಿ ಒಂದು ಚಿನ್ನದ ಘಂಟೆಯನ್ನು ಅಳವಡಿಸಿದ್ದನು.

ಇಂದಿಗೂ ಶಾಲಾ ಕಾಲೇಜುಗಳಲ್ಲಿ ಸಮಯವನ್ನು ತೋರಿಸಲು ಘಂಟೆಯನ್ನು ಬಾರಿಸಲಾಗುವುದು. ಇಂದಿಗೂ ರೈಲ್ವೇ ನಿಲ್ದಾಣದಲ್ಲಿ ರೈಲು ಹೊರಡುವುದನ್ನು ತೋರಿಸುವುದಕ್ಕಾಗಿ ಘಂಟೆಯ ಶಬ್ದವನ್ನು ಮಾಡುತ್ತಾರೆ. ಎಲೆಕ್ಟ್ರಾನಿಕ್ ಉಪಕರಣಗಳು ಹೆಚ್ಚು ಹೆಚ್ಚಾಗಿ ಬಳಕೆಗೆ ಬಂದು ವ್ಯಾವಹಾರಿಕ ಜೀವನದಲ್ಲಿ ಘಂಟೆಗಳ ಪಾತ್ರ ಕಡಿಮೆಯಾಗಬಹುದು. ಆದರೆ ಧಾರ್ಮಿಕ ಪ್ರಕ್ರಿಯೆಯಲ್ಲಿ ಘಂಟೆ ಮುಂದುವರೆಯುತ್ತದೆ ಎಂದು ತೋರುತ್ತದೆ.

*ಕೃಪೆ : 'ಶ್ರೀ ಶಂಕರ ಕೃಪಾ'*




PRAMOD
AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
: 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES



# ಬೆಳುವಾಯಿ ಎಂ. ದೇವಾನಂದ ಭಟ್ ನಮ್ಮ ಸಮಾಜದ ಹೆಮ್ಮೆ, ನಮ್ಮ ಗೌರವ...



ಕೀರ್ತಿಶೇಷ ಕಲಾವಿದ ಮಿಜಾರು ಕೆ. ಸುಬ್ರಾಯ ಭಟ್ ಮತ್ತು ಶ್ರೀಮತಿ ಅಂಜನಾ ದಂಪತಿಗಳ ಸುಪುತ್ರನಾಗಿ 1970ರಲ್ಲಿ ಜನಿಸಿದ ಇವರು ಒಬ್ಬ ಹುಟ್ಟು ಕಲಾವಿದ. ಎಳವೆಯಿಂದಲೇ ಸಮಾಜಮುಖಿ ಚಿಂತನೆಗಳನ್ನು ಹೊಂದಿ ತನ್ನ ಸುತ್ತಲಿನ ಅನೇಕರ ಬಾಳಿಗೆ ಉತ್ತಮ ದಾರಿ ತೋರಿದ ಸ್ನೇಹಮಯಿ, ಪರೋಪಕಾರಿ, ಗೌಪ್ಯದಾನಿ, ಸದಾ ಹೊಸ ವಿಷಯಗಳಿಗೆ ತೆರೆದುಕೊಳ್ಳುವ ಜನಾನುರಾಗಿ, ಸಾಹಿತ್ಯಪ್ರೇಮಿ, ಕಲಾತಪಸ್ವಿ, ಉತ್ತಮ ಸಂಘಟಕ, ವೃತ್ತಿಯಲ್ಲಿ ಛಾಯಾಗ್ರಾಹಕರಾದ ಇವರು, ಸಭ್ಯ ವ್ಯವಹಾರಸ್ಥ. ಬೆಳುವಾಯಿ, ಮೂಡುಬಿದಿರೆ, ಎಡಪದವುಗಳಲ್ಲಿ ಸುಮಾರು 26 ವರುಷಗಳಿಂದ "ಶೋಭಾ ಸ್ಟುಡಿಯೋ" ನಡೆಸಿಕೊಂಡು ಬರುತ್ತಿದ್ದು ಅನೇಕ ಶಿಷ್ಯರನ್ನು ಹೊಂದಿದ್ದಾರೆ. ಅಲ್ಲದೆ ಪ್ರವೃತ್ತಿಯಲ್ಲಿ ಯಕ್ಷಗಾನದ ಹಿಮ್ಮೇಳ ಮುಮ್ಮೇಳ ಕಲಾವಿದರಾಗಿ ಮೆರೆದವರು. 1997ರಿಂದ ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿ (ರಿ.) ಇದರ ಸ್ಥಾಪಕಾಧ್ಯಕ್ಷರಾಗಿ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರತೀ ವರುಷ ನೀಡುತ್ತಾ, ಅನೇಕರಿಗೆ ವೇದಿಕೆ ಒದಗಿಸುತ್ತಾ, ಹಿರಿ ಕಿರಿಯ ಸಾಧಕರಿಗೆ ಗೌರವ ಸಂಮಾನಗಳನ್ನು ಪ್ರತೀ ವರುಷ ಮೂಡುಬಿದಿರೆ ಆಸುಪಾಸುಗಳಲ್ಲಿ ಅನೇಕರಲ್ಲಿ ಕಲಾಭಿರುಚಿಯನ್ನು ಹುಟ್ಟುಹಾಕಿದ ಉತ್ತಮ ಸಂಘಟಕ.

ಉತ್ತಮ ಕಲಾಗಾರರಾಗಿ ಯಕ್ಷಗಾನದಲ್ಲೂ ಅನೇಕ ಶಿಷ್ಯವರ್ಗವನ್ನು ಸಂಪಾದಿಸಿದ ಗುರುಗಳಾಗಿದ್ದಾರೆ. ಯಕ್ಷಗಾನ ಕ್ಷೇತ್ರದಲ್ಲಿ ಮೂರು ಬಾರಿ ಅಮೇರಿಕಾ, ಲಂಡನ್, ಬೆಹರಿನ್, ದುಬೈ, ಕತಾರ್ ಹೀಗೆ ಕಳೆದ ಸಲ ಯಕ್ಷಗಾನವನ್ನು ಪ್ರಥಮ ಬಾರಿಗೆ ಆಸ್ಟ್ರೇಲಿಯಾದ ಪ್ರವಾಸೋದ್ಯಮ, ಸಂಸ್ಕೃತಿ ಸಚಿವರಾದ ಮಾನ್ಯ ಪೌಲ್ ಪಪಾಲಿಯವರು ಇವರನ್ನು ಗಣ್ಯರ ಸಮಕ್ಷ ಗೌರವಿಸಿರುವುದು ಯಕ್ಷಗಾನ ಕ್ಷೇತ್ರದಲ್ಲೇ ವಿಶೇಷ ವಿಷಯವಾಗಿದೆ. ಈಗಾಗಲೇ ಅನೇಕ ವೇದಿಕೆಯ ಹಿರಿಯರಿಂದ ಮಾನ ಸಂಮಾನಗಳನ್ನು ಪಡೆದಿರುವ ಇವರು ಮೂಡುಬಿದ್ರಿ ಶ್ರೀ ಆದಿಶಂಕರ ಬ್ರಾಹ್ಮಣ ಪರಿಷತ್ತು (ರಿ.) ಇದರ ಅಧ್ಯಕ್ಷರಾಗಿ, ಮೂಡುಬಿದ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಬ್ಯಾಂಕ್ ನಿರ್ದೇಶಕರಾಗಿರುತ್ತಾರೆ.

ಕಳೆದ 2012ರಲ್ಲಿ ಉಡುಪಿಯಲ್ಲಿ ಜರಗಿದ ಸ್ಥಾನಿಕ ಬ್ರಾಹ್ಮಣ ಸಮ್ಮೇಳನದ ಮೂಲ ಪ್ರೇರಕ ಶಕ್ತಿಯಾಗಿ, ಕಾರ್ಯದರ್ಶಿಯಾಗಿ ದುಡಿದು ಮುಂದೆ ಪಡುಬಿದ್ರಿ ಸಮಾವೇಶ, ಮಂಗಳೂರು ನಮ್ಮ ಸಮಾಜದ ಸಮಾವೇಶಗಳಲ್ಲಿ ದುಡಿದ ಪ್ರಾಮಾಣಿಕ ಸಮಾಜ ಸೇವಕ. ಮಹಾಮಂಡಲದ ಪ್ರಧಾನ ಕಾರ್ಯದರ್ಶಿಯಾಗಿ ಕಳೆದ ಹಲವು ವರುಷಗಳ ಅನುಭವ ಹೊಂದಿದ ಇವರು 2020ರ ಜನವರಿಯಲ್ಲಿ ಬೆಂಗಳೂರಿನಲ್ಲಿ ಜರಗಿದ ಯಶಸ್ವೀ ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಉತ್ತಮ ಸಂಘಟನೆಗೈದು ಯಶಸ್ಸನ್ನು ಕಂಡಿದ್ದಾರೆ. ಬ್ರಹ್ಮಾವರ ತಾಲೂಕು ಹೊಂದಿದ ಬಾರ್ಕೂರು, ಮಂದಾರ್ತಿ ನಮ್ಮವರನ್ನು ಒಂದಾಗಿಸಿ ಸಂಘ ನಿರ್ಮಾಣ ಆಗುವಂತೆ ಅಲ್ಲಿನ ಅವರನ್ನು ಪ್ರೇರೇಪಣೆಗೊಳಿಸಿ "ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ" ಸ್ಥಾಪನೆಗೆ ನಾಂದಿ ಹಾಡಿದವರು ಇವರು.

ಸ್ಥಾನಿಕ ಬ್ರಾಹ್ಮಣ ಸಮಾಜದ 15 ಸಂಘಗಳ ಒಕ್ಕೂಟವಾದ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಇದರ ನೂತನ ಅಧ್ಯಕ್ಷರಾಗಿ ಆಯ್ಕೆ ಆಗಿರುವುದು ಬಹಳ ಗೌರವದ ವಿಷಯವಾಗಿದೆ. ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವಾರ್ಷಿಕ ಮಹಾಸಭೆ, ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ, ಹೊಸ ಸದಸ್ಯರಿಗೆ ಗೌರವಾರ್ಪಣೆ, ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ, ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಜರಗಿತು. ಇವರ ಜೊತೆ ಹೊಸ ಸಮಿತಿಯಲ್ಲಿ ಉಪಾಧ್ಯಕ್ಷರಾಗಿ ಉದಯ ಬಾರ್ಕೂರು, ಪ್ರಧಾನ ಕಾರ್ಯದರ್ಶಿಯಾಗಿ ಡಾ। ವೈ. ಸುದರ್ಶನ್ ರಾವ್ ಉಡುಪಿ, ಜೊತೆ ಕಾರ್ಯದರ್ಶಿಯಾಗಿ ಮುರಳೀಧರ್ ಶರ್ಮ ನಿಟ್ಟೆ, ಕೋಶಾಧಿಕಾರಿಯಾಗಿ ಎನ್. ಎಸ್. ನಟರಾಜ್, ಪುತ್ತೂರು ಆಯ್ಕೆಗೊಂಡಿದ್ದಾರೆ. ಪ್ರತೀ 15 ಸಂಘದಿಂದ ಒಬ್ಬ ಪ್ರತಿನಿಧಿ ಮತ್ತು ಆಜೀವ ಸದಸ್ಯರಿಂದ 13 ಜನ ಮಹಾಮಂಡಲಕ್ಕೆ ಆಯ್ಕೆ ಆಗಿರುತ್ತಾರೆ.

ಮುಂದೆ ಇವರ ಕನಸಿನಂತೆ ಚೆನ್ನೈ, ಗೋವಾ, ಕಳಸ ಹೀಗೆ ಅನೇಕ ಕಡೆಗಳಲ್ಲಿ ನಮ್ಮವರನ್ನು ಒಂದಾಗಿಸಿ ಸಂಘ ಕಟ್ಟುವ ಧ್ಯೇಯ ಹೊಂದಿರುತ್ತಾರೆ. ಸಮಾಜದ ಅನೇಕ ಸಂಪನ್ಮೂಲ ವ್ಯಕ್ತಿಗಳು, ವಿದ್ವಾಂಸರು ಮತ್ತು ಕಲಾಬಳಗಗಳ ಒಡನಾಟ ಹೊಂದಿರುವ ಇವರು ಸರಳ ಸಜ್ಜನ. ಎಲ್ಲರನ್ನೂ ಜೊತೆಗೂಡಿಸಿಕೊಂಡು ಮುಂದೆ ಸಾಗುವ ಮನೋಪ್ರವೃತ್ತಿಯ ದಕ್ಷ ಸಂಘಟಕ.

ಇವರ ಪರ್ಯಾಯದ ಮುಂದಿನ ದಿನಗಳಲ್ಲಿ ಮಹಾಮಂಡಲ ಸಮಾಜದಲ್ಲಿ ಉತ್ತುಂಗಕ್ಕೇರಲಿ. ತನ್ಮೂಲಕ ಸಮಾಜದಲ್ಲಿ ಇನ್ನೂ ಅನೇಕ ಉತ್ತಮ ಕಾರ್ಯಗಳನ್ನು ಮಾಡುವ ಶಕ್ತಿ ಭಗವಂತ ಅವರಿಗೆ ಒದಗಿಸಲಿ ಎಂಬ ಹಾರೈಕೆಗಳು ನಮ್ಮದು...

*– ಶ್ರೀ ಬೊಕ್ಕಸ ಸುರೇಶ್ ರಾವ್ ಮೂಡುಬಿದಿರೆ*

## ಸನ್ಮಾನ



ಶ್ರೀ ಪಲಿಮಾರು ಮಠಾಧೀಶರಿಂದ ಮಠದ ಲೆಕ್ಕಪರಿಶೋಧಕರಾದ ಉಡುಪಿಯ ಶ್ರೀ ಗಣೇಶ್ ಹೆಬ್ಬಾರ್‌ರಿಗೆ ಸನ್ಮಾನ ನಡೆಯಿತು.

## 'ಬಂಡೀರಥ' ಸಮರ್ಪಣೆ



ಮಕರ ಸಂಕ್ರಾತಿಯ ದಿನದಂದು ಮೂಡುಬಿದಿರೆಯ ಶ್ರೀ ಚಂದ್ರಶೇಖರ ದೇವಸ್ಥಾನಕ್ಕೆ ದಿ। ಗೋಪಾಲಕೃಷ್ಣ ಮತ್ತು ಶ್ರೀಮತಿ ಸತ್ಯಭಾಮರವರ ಮಕ್ಕಳು ಹಾಗೂ ದಾನಿಗಳ ನೆರವಿನಿಂದ "ಬಂಡೀರಥ"ವನ್ನು ಸಮರ್ಪಿಸಲಾಯಿತು.

## ಮರ ಕಡಿಯುವ ಮುಹೂರ್ತ



ಶ್ರೀ ಬಾಲಗಣಪತಿ ಪ್ರಸನ್ನಪಾರ್ವತೀ ದೇವಸ್ಥಾನ, ಪಡುಬಿದ್ರಿ ಇಲ್ಲಿಯ ಪುಷ್ಪಕ ವಿಮಾನದ ಪೂರ್ವತಯಾರಿಗಾಗಿ ಮರ ಕಡಿಯುವ ಕಾರ್ಯಕ್ರಮದ ಮುಹೂರ್ತ ನೆರವೇರಿತು.


ರಾಮಾ ಅಟೋಮೊಬೈಲ್ಸ್



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006


ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :

ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. LAXMI PRASAD**

ಕಾರ್ಯಕಾರಿಣಿ ಮಂಡಳಿ ಸದಸ್ಯರು



D. K. District Used Vehicle Dealers & Agents Association (R), Mangalore

Flat No. 103, Deepa Residency, Near Preethi Apartment

Kodiyalguttu West, Kodiyalbail, MANGALORE - 575 003

Mob. : 9845644489, 9964236997 E-mail : laxmiprasad5010@gmail.com



ಜ್ಞಾನಾರ್ಜನೆಯ ಗುರಿಯೊಂದಿಗೆ

'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!

ಶುಭಾಶಯಗಳೊಂದಿಗೆ –

**G. K. KOLPE**

House No. 7-3-31-D1, 'Vaishnavi' (Upstairs)

Vadiraja 2nd Cross, Bailakere, Udupi - 576 101

Mobile : 9449903002





## ಜ್ಞಾನ – ನುಡಿ

ನಿಮ್ಮನ್ನು ಹಾಳು ಮಾಡುವ ಸಾಮರ್ಥ್ಯ ಬೇರೆ ಯಾರಿಗೂ ಇಲ್ಲ. ನಿಮ್ಮನ್ನು ಹಾಳು ಮಾಡುವ ಸಾಮರ್ಥ್ಯವಿರುವುದು ನಿಮಗೆ ಮಾತ್ರ.

– **ಸ್ವಾಮಿ ವಿವೇಕಾನಂದ**

## ಜ್ಞಾನ – ನಗೆ

ತವರುಮನೆಗೆ ಹೋಗಿದ್ದ ಪತ್ನಿ ಫೋನಾಯಿಸಿ, "ನೀವೀಗಲೇ ಬಂದು ನನ್ನನ್ನು ಕರೆದುಕೊಂಡು ಹೋಗಿ" ಎಂದು ಪತಿಗೆ ತಿಳಿಸಿದಳು. "ಇನ್ನೂ ಸ್ವಲ್ಪ ದಿನ ಅಲ್ಲೇ ಇದ್ದು ಬಿಡು ಕಣೆ" ಪತಿ ಸಲಹೆಯಿತ್ತ. ತಕ್ಷಣ ಪತ್ನಿ ವ್ಯೆಯಾರದಿಂದ "ಇಲ್ಲ ರೀ... ಈಗಾಗಲೇ ಅಣ್ಣ, ಅತ್ತಿಗೆ, ತಂಗಿ, ಅಮ್ಮ, ಅಪ್ಪನ ಜೊತೆ ಎರಡ್ಮೂರು ಬಾರಿ ಜಗಳ ಆಡಿಯಾಯಿತು. ಆದರೆ ನಿಮ್ಮ ಜೊತೆ ಜಗಳ ಆಡಿದಷ್ಟು ಮಜಾ ಯಾರ ಜೊತೆಯೂ ಸಿಗುವುದಿಲ್ಲ ಕಣ್ರೀ ಎಂದಳು!

## ಜ್ಞಾನ – ಗಾದೆ

- ದೀಪೊಗ್ ಪಾಂತೆ ಬೂಳಿ ಲೆಕ್ಕ.
- ದಾನ ಕೊಳಂಡಲಾ ಗ್ರಹಚಾರ ಪೋವನ್.
- ದಾನೊಟ್ ಸಿಕ್ಕಿನೊ ಧರ್ಮಗ್ ಪೋನ್.

## ಜ್ಞಾನ – ವಿಸ್ಮಯ

ಚೀನಾ ಮಹಾಗೋಡೆಯ ನಿರ್ಮಾಣ ನಡೆಯುತ್ತಿದ್ದಾಗಲೇ ಮೃತರಾದ ಕೆಲಸಗಾರರ ಸಂಖ್ಯೆಯೇ ಸುಮಾರು ಒಂದು ದಶಲಕ್ಷ! ಹಾಗೆ ಪ್ರಾಣಬಿಟ್ಟ ಕೆಲಸಗಾರರೆಲ್ಲರನ್ನೂ ಗೋಡೆಯೊಳಕ್ಕೆ ಸಮಾಧಿ ಮಾಡಲಾಗಿದೆ. ಹಾಗಾಗಿಯೇ ಚೀನಾದ ಮಹಾಗೋಡೆ ಜಗತ್ತಿನ ಅತ್ಯಂತ ಉದ್ದದ ಗೋರಿ ಎಂದೇ ಕುಖ್ಯಾತ!

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*